# ಹತ್ತನೇ ತರಗತಿ ಅರ್ಧವಾರ್ಷಿಕ ಮಾದರಿ ಪ್ರಶ್ನೆಪತ್ರಿಕೆ

**ವಿಷಯ : ದ್ವಿತೀಯ ಭಾಷೆ ಕನ್ನಡ (33K)** **ತರಗತಿ : 10ನೇ ತರಗತಿ**

**ಸಮಯ : 3 ಗಂಟೆಗಳು** **ಗರಿಷ್ಠ ಅಂಕಗಳು : 80**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **4 × 1 = 4**

1. ವಿಜಾತಿಯ ಸಂಯುಕ್ತಾಕ್ಷರಕ್ಕೆ ಈ ಪದವು ಸೂಕ್ತವಾದ ಉದಾಹರಣೆಯಾಗಿದೆ.

   (ಎ) ಅಮ್ಮ (ಬಿ) ಅಕ್ಕರೆ

   (ಸಿ) ಕನ್ನಡ (ಡಿ) ಅಕ್ಷರ

2. 'ಭಾವೈಕ್ಯ' ಈ ಪದವು ಆಗುವ ಸಂಧಿ

   (ಎ) ಗುಣಸಂಧಿ (ಬಿ) ವೃದ್ಧಿಸಂಧಿ

   (ಸಿ) ಸವರ್ಣದೀರ್ಘಸಂಧಿ (ಡಿ) ಯಣ್‌ಸಂಧಿ

3. 'ಮೂರನೆಯ' ಈ ಪದವು ವ್ಯಾಕರಣಾಂಶದ ಈ ಭಾಗಕ್ಕೆ ಸೇರಿದೆ.

   (ಎ) ಸಂಖ್ಯೇಯ ವಾಚಕ (ಬಿ) ಗುಣವಾಚಕ

   (ಸಿ) ಪ್ರಕಾರವಾಚಕ (ಡಿ) ಸಂಖ್ಯಾವಾಚಕ

4. 'ಮೇರಿ ಶಾಲೆಗೆ ಹೋಗುವಳು' – ಇಲ್ಲಿ ಕ್ರಿಯೆಯು ನಡೆಯುವುದನ್ನು ಸೂಚಿಸುವ ಕಾಲ ಇದಾಗಿದೆ.

   (ಎ) ಭೂತಕಾಲ (ಬಿ) ನಿಷೇಧಕಾಲ

   (ಸಿ) ಭವಿಷ್ಯತ್‌ಕಾಲ (ಡಿ) ವರ್ತಮಾನಕಾಲ

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **12 × 1 = 12**

5. ಬೇಡನು ಎಲ್ಲಿ ವಾಸವಾಗಿದ್ದನು?
6. ಅಸಿ–ಮಸಿಗಿಂತ ಮಹತ್ವವಾದುದು ಯಾವುದು?
7. ಪುಟ್ಟರಾಜ ಗವಾಯಿಗಳು ಯಾವಾಗ ನಿಧನರಾದರು?
8. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?
9. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?

10. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?

11. ನಾವೀಗ ಎಲ್ಲೆಲ್ಲಿ ತೂಗಾಡುವ ಹಕ್ಕಿಯ ಗೂಡುಗಳನ್ನು ಕಾಣುತ್ತಿದ್ದೇವೆ?

12. ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?

13. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?

14. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ?

15. ಜೀವನದಲ್ಲಿ ಗಾಳಿ ಬಂದೆಡೆ ತಿರುಗುವುದು ಏನು?

16. ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು?

**III. ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 8 × 2 = 16**

17. ಮರವು ಒಣಗಿ ನಿಲ್ಲಲು ಕಾರಣವೇನು?

18. ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು?

19. ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ?

20. ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದ್ದಾರೆ?

21. ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು?

22. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ?

23. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?

24. ಕಳ್ಳರ ಗುರುವಿನ ಮನಃ ಪರಿವರ್ತನೆ ಹೇಗಾಯಿತು?

**IV. ಕೆಳಗಿನ ಕವಿ/ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1 × 3 = 3**

25. ಅ.ರಾ. ಮಿತ್ರ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. 1 × 3 = 3**

26. ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುವ ರವಿಕಿರಣಗಳ ಸಿರಿಗೆ ಮೆರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ
ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ ಬರೆಯಿರಿ. 1 × 3 = 3**

27. ಕಾಡತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು.

**VII. ಕೆಳಗಿನ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1 × 3 = 3**

28. "ಮಾತೇ ಮುತ್ತು, ಮಾತೇ ಮೃತ್ಯು"

**ಅಥವಾ**

"ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು"

**VIII. ಕೆಳಗಿನವುಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ. 5 × 3 = 15**

29. "ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ."
30. "ಗೂಡನ್ನು ಅಂದಗೊಳಿಸುವ ಸೌಂದರ್ಯ ಪ್ರಜ್ಞೆಯು ಅವಕ್ಕಿದೆ."
31. "ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು."
32. "ಕೂಗಾಡಿ, ಹಾರಾಡಿ ಫಲವದೇನು?"
33. "ಪರಹಿತಕೆ ಬಳಲುತಿರಲದುವೆ ಜೀವನವು."

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 × 4 = 4**

34. ಕೊರಡ ................................................

............................ ಕಲರವಕೆ ಮತ್ತೇರಿದೆ.

**ಅಥವಾ**

ಯುಗದ ಹಿಂದಿನ .................................

.............................. ತುಂಬ ಸವಿಚೈತ್ರವು.

**X. ಕೆಳಗಿನ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1 × 4 = 4**

35. ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ವಿವರಿಸಿ.

**ಅಥವಾ**

ವಿಶೇಷ ಚೇತನರ ವಿಷಯದಲ್ಲಿ ನಮ್ಮ ಹೊಣೆಗಾರಿಕೆಗಳೇನು?

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ. 2 × 2 = 4**

**36.** ಆಯಾ ಸಮಾಜದ ರೀತಿ–ನೀತಿಗಳನ್ನು ಆಚಾರ–ವಿಚಾರಗಳನ್ನು ವರ್ತನಾ ಪದ್ಧತಿಗಳನ್ನು, ನಡಾವಳಿಯ ರೂಪರೇಷೆಗಳನ್ನೇ ಸಂಪ್ರದಾಯ ಎನ್ನುತ್ತೇವೆ. ರೂಢಿ, ಪದ್ಧತಿ ಎಂಬ ಪದಗಳನ್ನು ಇದಕ್ಕೆ ಸಂವಾದಿಯಾಗಿ ಬಳಸುತ್ತೇವೆ. ಬಹುಕಾಲದಿಂದ ಬದಲಾಗದೆ ಉಳಿದು ಬಂದ ರೂಢಿಗಳನ್ನೇ ಸಂಪ್ರದಾಯ ಎಂದು ಕರೆಯುತ್ತೇವೆ. ಅತಿಥಿಗಳು ಮನೆಗೆ ಬಂದಾಗ ಕಾಲು ತೊಳೆಯಲು ನೀರು ಕೊಡುವುದು, ಬೆಳಿಗ್ಗೆ ಬಾಗಿಲಿಗೆ ನೀರು ಹಾಕುವುದು, ರಂಗೋಲಿ ಬಿಡುವುದು, ಹಬ್ಬ ಹರಿದಿನಗಳಲ್ಲಿ ಮಾವಿನತೋರಣ ಕಟ್ಟುವುದು, ಬಾಳೆಗಿಡಗಳನ್ನು ಕಟ್ಟುವುದು, ಪೂಜಾಕಾರ್ಯಗಳಿಗೆ ಮಡಕೆಗಳಲ್ಲಿ ನೀರು ತರುವುದು, ಗಿಡಮರಗಳನ್ನು, ಪ್ರಾಣಿ ಪಕ್ಷಿಗಳನ್ನು ಪೂಜಿಸುವುದು. ಮಗು ಹೊಸ್ತಿಲು ದಾಟಿದ್ದಕ್ಕೆ ತೆಂಗಿನಕಾಯಿ ಒಡೆಯುವುದು, ಉಪವಾದ ಮಾಡುವುದು, ಹಬ್ಬಹರಿದಿನಗಳಲ್ಲಿ ನೆಂಟರಿಷ್ಟರನ್ನು ಆಹ್ವಾನಿಸಿ ಸಂಭ್ರಮಿಸುವುದು, ದಾನ ಧರ್ಮ ಮಾಡುವುದು ಇವೇ ಮೊದಲಾದ ಸಂಪ್ರದಾಯಗಳು ಜನಪದರ ಸಾಮಾಜಿಕ ಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರಿವೆ. ಕೆಲವು ಅವೈಜ್ಞಾನಿಕ ಸಂಪ್ರದಾಯಗಳನ್ನು ಹೊರತುಪಡಿಸಿ ಧಾರ್ಮಿಕ, ಸಾಮಾಜಿಕ ಸಂಪ್ರದಾಯಗಳು ಆತ್ಮಸ್ಥೈರ್ಯ, ಸ್ವಾಭಿಮಾನವನ್ನು ತುಂಬುತ್ತವೆ. ವ್ಯಕ್ತಿ ಹುಟ್ಟಿನಿಂದ ಸಾಯುವವರೆಗೂ ಹತ್ತು ಹಲವು ಸಂಪ್ರದಾಯಗಳ ನಡುವೆ ಬಾಳಿ ಬೆಳಗುತ್ತಾನೆ. ದುಷ್ಟಚಿಂತನೆ, ದುಶ್ಚಟ, ದುರ್ನಡತೆಗಳಿಂದ ಬಹುದೂರ ಇರಲು ಒಳ್ಳೆಯ ಸಂಪ್ರದಾಯಗಳು ನಮಗೆ ನೆರವಾಗುತ್ತವೆ. ಒಳ್ಳೆಯ ಸಂಪ್ರದಾಯಗಳನ್ನು ಪಾಲಿಸುವ ಮೂಲಕವಾಗಿ ಉತಮ ವ್ಯಕ್ತಿಗಳಾಗಿ ಸಮಾಜದಲ್ಲಿ ಬಾಳಬಹುದಾಗಿದೆ.

**ಪ್ರಶ್ನೆಗಳು :**

(ಅ) ನಮ್ಮ ಹಿರಿಯರು ಪಾಲಿಸುತ್ತಿದ್ದ ಸಂಪ್ರದಾಯಗಳು ಯಾವುವು?

(ಆ) ಸಂಪ್ರದಾಯಗಳು ನಮ್ಮ ಬದುಕಿಗೆ ಹೇಗೆ ಪೂರಕವಾಗಿವೆ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1 × 4 = 4**

37. ಸಮೂಹ ಮಾಧ್ಯಮಗಳು **ಅಥವಾ** ರಾಷ್ಟ್ರೀಯ ಭಾವೈಕ್ಯತೆ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 × 5 = 5**

38. ನಿಮ್ಮನ್ನು ಚಾಮರಾಜನಗರದ ಸರ್ಕಾರಿ ಪ್ರೌಢಶಾಲೆಯ 'ಪುರಂದರ' ಎಂದು ಭಾವಿಸಿಕೊಂಡು ನಿಮ್ಮ ಬಡಾವಣೆಯಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸುವಂತೆ ಕೋರಿ ಗ್ರಂಥಾಲಯ ಇಲಾಖೆಯ ಜಿಲ್ಲಾ ಉಪನಿರ್ದೇಶಕರಿಗೆ ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಮಡಿಕೇರಿಯ ಸರ್ಕಾರಿ ಪ್ರೌಢಶಾಲೆಯ 'ವಚನಶ್ರೀ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ 'ವಿಶ್ವಪರಿಸರದ ದಿನಾಚರಣೆ' ಯನ್ನು ಕುರಿತು ಸೋಮವಾರಪೇಟೆ ತಾಲೂಕಿನ ಶಿರಂಗಾಲ ಗ್ರಾಮದಲ್ಲಿರುವ 'ವರುದಿನಿ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.

* * *